# ತಾಯಿ ನಾಡಿಗೆ ನಮನ

ಮೂಡಣ ಬಾನಲಿ ನೇಸರು ಮೂಡಲು
ಪ್ರಕೃತಿಯ ಮಾತೆಯು ನಲಿಯುವಳು ||
ಹಸುರಿನ ಸೀರೆಯ ನುಡುತ್ತಲಿ ನೀರೆಯು
ತರದಲಿ ಹಿರಿ ಹಿರಿ ಹಿಗ್ಗುವಳು ||೧||

ಗಿಡಮರ ಬಳ್ಳಿಗಳಿಂದಲಿ ಧರಣಿಯು
ಪಚ್ಚೆಯ ಬಣ್ಣದಿ ಮಿರುಗುವುದು ||
ಇಂಪಿನ ಕೂಜನ ಮಾಡುವ ಕೋಗಿಲ
ವನದೇವಿಯ ತಾ ಭಜಿಸುವುದು ||೨||

ತುಂಬಿಯ ನಾದವು ಕೇಳಲು ಹೂಗಳು
ಅರಳುತ ತಲೆಯನು ತೂಗುವವು ||
ಖಗಮೃಗ ಸಂಕುಲವೆಲ್ಲವು ಪ್ರಕೃತಿಗೆ
ಶುಭ ಅರುಣೋದಯ ಕೋರುವವು ||೩||

ಕೆರೆ, ಕೊಳ, ನದಿ, ಜಲರಾಶಿಗಳೊಡಣೆಯು
ಮಲೆನಾಡಿನ ನೀರಾ ನಿರ್ಝರವು ||
ಹಕ್ಕಿಗಳಿಂಚರ ಸುಮಧುರ ಗಾನಕೆ
ತನ್ಮಯ ತಾನದ ನಿಲುವವು ||೪||

ಕಂಪಿನ ತಂಪಿನ ಸುಂದರ ಬನದಲಿ
ಉಲಿಯುವ ದುಂಬಿಗಳು ತಣಿಸುವುವು ||
ವನರಾಣಿಗೆ ಚಾಮರವನು ಬೀಸುತ್ತ
ಹಾಡಿಗೆ ತಾಳವ ಹಾಕುವುವು ||೩||

ನಿಸರ್ಗ ದೇವಿಯ ಮಡಿಲೊಳು ಮಕ್ಕಳು
ಸುಪ್ರೇಮದಿಂದಲಿ ಆಡುವರು ||
ವನಸುಮ ಭೂಮಿಯ ಉಳಿಸುತ ಮೆರೆಯುವ
ಭವ್ಯ ಪ್ರತಿಜ್ಞೆಯ ಗೈಯ್ಯುವರು ||೨||

ಮೂಡಣ ಬಾನಲಿ ನೇಸರು ಮೂಡಲು
ಪ್ರಕೃತಿಯ ಮಾತೆಯು ನಲಿಯುವಳು ||
ಹಸುರಿನ ಸೀರೆಯ ಉಡುತಲಿ ನೀರೆಯು
ತೆರದಲಿ ಹಿರಿ ಹಿರಿ ಹಿಗ್ಗುವಳು ||೧||

ತಾಯ ನಾಡಿಗೆ ನಮನ....
ತಾಯ ನಾಡಿಗೆ ನಮನ....